ಚಿತ್ರದುರ್ಗ ಜಿಲ್ಲೆ ಹರಿಹರದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಸಾಕಷ್ಟು ನಿವೇಶನವಿದ್ದು ಅಲ್ಲಿನ ಕೆಲಸ ಮಾಡತಕ್ಕಂಥ ಎಲ್ಲಾ ವರ್ಗದ ನೌಕರಿಗೆ ಕ್ವಾಟ್ರಸ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಹಾಗೂ ಇದನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಪರಿಶೀಲಿಸಲಾಗುತ್ತಿದೆ.

ಚಿಕ್ಕೋಡಿ ತಾಲ್ಲೂಕಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ

3772 - ಶ್ರೀ ವೀರಕುಮಾರ್ ಎ. ಪಾಟೀಲ (ಸತಲಕ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಆ) ಮಂಡಲ್ ಪಂಚಾಯಿತಿವಾರು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯ ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆಯೇ?

ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 4.

ಆ) ಇಲ್ಲ.

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಅರ್ಹತೆ ಆಧಾರದ ಮೇಲೆ ಸೀಟುಗಳ ಹಂಚಿಕೆ

3675 - ಶ್ರೀ ಕರಿಯಣ್ಣ (ಹೊಳಿಹೊನ್ನೂರು) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಖಾಸಗಿ ವೈದ್ಯಕೀಯ ಕಾಲೇಜುಗಳು ಸರ್ಕಾರ ನಿಗಧಿ ಮಾಡಿರುವ ಕ್ಯಾಪಿಟೇಶನ್ ಫೀಯನ್ನು ಒಪ್ಪಿಕೊಂಡ ಮೇಲೆ ಪ್ರತಿಯೊಂದು ಖಾಸಗಿ ಕಾಲೇಜುಗಳ ಸೀಟುಗಳನ್ನು ಕ್ಯಾಪಿಟೇಶನ್ ಫೀ ಆಧಾರದ ಮೇಲೆ ಸರ್ಕಾರವೇ ಮೆರಿಟ್ ಆಧಾರದ ಮೇಲೆ ಸೀಟುಗಳನ್ನು ಹಂಚುವುದಾಗಿ ಈ ಹಿಂದೆ ಆಶ್ವಾಸನೆ ನೀಡಲಾಗಿದ್ದು ನಿಜವಲ್ಲವೇ ಹಾಗಿದ್ದಲ್ಲಿ ಆಶ್ವಾಸನೆ ನೀಡಿದಂತೆ 1991-92ನೇ ಸಾಲಿನಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು?

ಆ) ಸರ್ಕಾರದ ಖಾಸಗಿ ಕಾಲೇಜುಗಳ ಪೂರ್ಣ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಹಂಚಲು ಆಗದಿದ್ದರೆ ಸರ್ಕಾರ ನಿಗಧಿ ಮಾಡಿದ ಕ್ಯಾಪಿಟೇಶನ್ ಫೀಯನ್ನು ತೆಗೆಯಬಾರದೇಕೆ?

ಇ) ಸರ್ಕಾರದ ನಿಬಂಧನಗಳನ್ನು ಒಂದು ಪಕ್ಷ ಈ ವೈದ್ಯಕೀಯ ಕಾಲೇಜುಗಳು ಪಾಲಿಸದಿದ್ದರೆ ಮತ್ತೆ ಮತ್ತೆ ಇವರಿಗೆ ಹೆಚ್ಚಿಗೆ ಸೀಟುಗಳನ್ನು ಕೊಡಲು ಕಾರಣವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): 1991-92 ನೇ ಶೈಕ್ಷಣಿಕ ವರ್ಷದಿಂದ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ

ಮೆರಿಟ್ ಆಧಾರದ ಮೇಲೆ ನೀಡಬೇಕೆಂದು ಅಧಿಕೃತ ಸ್ಥಾಪನೆ ಸಂಖ್ಯೆ ಆಕುಕ 166 ಎಮ್.ಎಸ್.ಎಫ್. 91 ದಿನಾಂಕ 25.5.1991ರಲ್ಲಿ ಸೂಚಿಸಲಾಗಿದೆ ಸದರಿ ಅಧಿಕೃತ ಸ್ಥಾಪನಕ್ಕೆ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ತಡೆಯಾಜ್ಞೆ ನೀಡಿದೆ.

ಆ) ಕ್ಯಾಪಿಟೇಷನ್ ಶುಲ್ಕ ವಸೂಲಾತಿಯನ್ನು ಈಗಾಗಲೇ ರದ್ದಿಪಡಿಸಲಾಗಿದೆ ಆದ್ದರಿಂದ ಕ್ಯಾಪಿಟೇಶನ್ ಶುಲ್ಕ ವಸೂಲಾತಿಯ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರವೇಶ ಸಾಮರ್ಥ್ಯವನ್ನು ಹೆಚ್ಚಿಸಿರುವುದಿಲ್ಲ.

ಶಿಕಾರಿಪುರ ತಾಲ್ಲೂಕಿಗೆ ಅಂಗನವಾಡಿ ಯೋಜನೆ

3684 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಶಿಕಾರಿಪುರ ತಾಲ್ಲೂಕಿಗೆ ಅಂಗನವಾಡಿ ಯೋಜನೆ ಮಂಜುರಾಗಿದೆಯೇ?*

ಆ) *ಹಾಗಿದ್ದಲ್ಲಿ ಇದನ್ನು ಎಂದು ಪ್ರಾರಂಭಿಸಲಾಗುವುದು?*

ಇ) *ಶಿಕಾರಿಪುರ ತಾಲ್ಲೂಕು ಅಲ್ಲದೆ ಬೇರೆ ಯಾವ ಯಾವ ತಾಲ್ಲೂಕುಗಳಿಗೆ ಅಂಗನವಾಡಿ ಯೋಜನೆ ಮಂಜೂರಾಗಿದೆ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು

ಇ) ತರೀಕೆರೆ ಕಲಘಟಗಿ ರಾಯಚೂರು ಸಿರಗುಪ್ಪ ಮತ್ತು ಗುಡಿಬಂಡೆ.

ಕೋಲಾರದ ಚಿನ್ನದ ಗಣಿಯಲ್ಲಿ ಕಡಿಮೆ ಪ್ರಮಾಣದ ಚಿನ್ನದ ಉತ್ಪತ್ತಿ

3686 - ಶ್ರೀ ಎಂ.ವಿ. ವೆಂಕಟ್ಪ (ಮುಳಬಾಗಿಲು) : ಮಾನ್ಯ ಗಣಿ ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೋಲಾರ ಚಿನ್ನದ ಗಣಿಯಲ್ಲಿ ಚಿನ್ನ ಉತ್ಪತ್ತಿ ಕಡಿಮೆಯಾಗಿರುವ ಪ್ರಯುಕ್ತ ಗಣಿಗಳನ್ನು ಮುಚ್ಚುವ ಪ್ರಮೇಯವು ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಸುಮಾರು ಹತ್ತು ಸಾವಿರ ಗಣಿ ಕಾರ್ಮಿಕರ ನಿರುದ್ಯೋಗಿಗಳಾಗುವುದು ತಪ್ಪಿಸಲು ಕ್ರಮ ಕೊಳ್ಳಬೇಕೆಂದು ಕೇಂದ್ರಕ್ಕೆ ಒತ್ತಾಯಿಸುವರೇ?*

(ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):

ಅ) ಬಂದಿದೆ.

ಆ) ಹೌದು.

ದ.ಕ. ಜಿಲ್ಲೆಯಲ್ಲಿ ಸುಯಂ ಉದ್ಯೋಗ ಯೋಜನೆಯಡಿಯಲ್ಲಿ ಬಿಡುಗಡೆಯಾದ ಹಣ

3685 - ಶ್ರೀ ಇದಿನಬ್ಬ (ಉಳ್ಳಾಲ) : ಸಣ್ಣ ಕೈಗಾರಿಗಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1988-89 1989-90 1990-91 ರಲ್ಲಿ ಸ್ವಯಂ ಉದ್ಯೋಗ ಯೋಜನೆಯಲ್ಲಿ ಎಷ್ಟು ಜನರಿಗೆ ಉದ್ಯೋಗ ಒದಗಿಸಲಾಗಿದೆ?*

ಆ) *ಈ ಯೋಜನೆಗೆ ಮೇಲ್ಕಂಡ ಸಾಲುಗಳಲ್ಲಿ ಬಿಡುಗಡೆಯಾದ ಹಣವೆಷ್ಟು?*